

## ಸುಬ್ಬು ಹೊಲೆಯಾರ್

ಕಲೆ: ವಿಶ್ವನಾಥ್ ಎ.ಎಸ್.



# ಅಂಜಿ ಅರುಹಿದೆ ಕೋರೆಹಲ್ಲುಗಳ ಕಂಡು

ಧರ್ಮ, ದೂಳಿನಲ್ಲಿ ಬಿದ್ದು ಹೊರಳಾಡಿ
ಕೊಂದು, ಮುಟ್ಟದ ಸಾವಾಗಿದ್ದೇನೆ
ಉಳಿದಿಲ್ಲ ಹೇಳಲೇನು, ಕಣ್ಣೀರ ಕಳವಳ
ಒಡಲೊಳಗೆ ಉರಿವ ಕೆಂಡ ಕರುಳ ಸುಟ್ಟು
ಉಸಿರು ಹೊಗೆಯಾಗಿ ಈಗ
ಅಂಜಿ ಅರುಹಿದೆ ಕೋರೆಹಲ್ಲುಗಳ ಕಂಡು
ಇದ ಮುರಿದು, ಪಾದಗಳಲ್ಲಿ ಹುಟ್ಟಿದವರೆಂದವರ
ಹೊಸಕದೆ, ಒಳಕಥೆ ಹೇಳುತ್ತಿದ್ದೇನೆ

ಆಡಿ, ಮಾತನಾಡಿ ತುಟಿಬಿಚ್ಚಿ...
ಹೊಲೆದು ಬಿಡುತ್ತಾರೆ, ಮಾತುಗಳನ್ನ
ಮುನ್ನಡೆಯದಿದ್ದರೆ ಹೆಜ್ಜೆಗಳು
ಮುರಿದು ಹಾಕುತ್ತಾರೆ, ಕಾಲುಗಳನ್ನ
ಗುಡಿಸಿ ಬಿಡುತ್ತಾರೆ, ಗುರುತುಗಳಿಲ್ಲದಂತೆ
ಮೆದುಳ ಗ್ರಂಥಪಾಲಕರು

ಹೇಳುತ್ತಾರೆ ಎಷ್ಟು ಮುಂದುವರಿದ್ದೇವೆ ಎಂದು
ಕಿರೀಟ ಇಡುತ್ತೇವೆ ಎಂದು ಕೊರಳ ಹರಿದು ಹಾಕುತ್ತಾರೆ
ನೆತ್ತರಕ್ಕೂ ಬಣ್ಣ ಹಚ್ಚುವ ಕುಶಲಮತಿಗಳಿವರು